

ರೂಪುಗೊಂಡಿದೆ. ಕೂದಲುಗಳಿಗೆ ಕಾಮನಬಿಲ್ಲಿನ ಬಣ್ಣಗಳ ಮೆರುಗನ್ನು ನೀಡುವುದು ಮತ್ತೊಂದು ಆಕರ್ಷಣೆ. ಒಪೆಲ್ ಸ್ಟೋನ್ ಎಂಬುದು ಬೆಳಕಿನ ತೀಕ್ಷ್ಣತೆಗೆ ತಕ್ಕಂತೆ ಪಿಂಕ್, ನೀಲಿ, ಪರ್ಪಲ್ ಮೆರುಗನ್ನು ಪಡೆದುಕೊಳ್ಳುವ ಹೊಳೆಯುವ ರತ್ನ ಅಥವಾ ಮಣಿಯಂತೆ ಕಾಣುವ ಬಣ್ಣಗಳ ಮಿಶ್ರಣವಾಗಿದೆ.

ಈ ರೀತಿಯ ಟ್ರೆಂಡನ್ನು ಸೃಷ್ಟಿಸಿದವರು ಔರಾ ಫ್ರೈಡಾನ್. ಇವರು ನೀಲಿಬಣ್ಣದ ಛಾಯೆಯ ಮೇಲೆ ಪ್ರಯೋಗ ನಡೆಸಿ, ಅದಕ್ಕೆ ವಿಶಿಷ್ಟ ಬಣ್ಣ ಕೊಡುವ ಟೋನರ್‌ಗಳನ್ನು ಸೇರಿಸಿ, ನೀಲಿ ಛಾಯೆಯು ಪ್ಲಾಟಿನಮ್ ಹಾಗೂ ಪೇಲವ ಹಳದಿ ಬಣ್ಣಕ್ಕೆ ತಿರುಗುವುದನ್ನು ಮತ್ತು ಬೆಳಕಿನ ಪ್ರಮಾಣಕ್ಕೆ ಅನುಗುಣವಾಗಿ ಬಣ್ಣವು ಕಾಮನಬಿಲ್ಲಿನ ಬಣ್ಣಗಳಂತೆ ಮೆರುಗು ಹೊಂದಿ ಹೊಳೆಯುವುದನ್ನು ಪತ್ತೆಹಚ್ಚಿದರು.

'ಒಪೆಲ್ ಬಣ್ಣವು ಸುಲಭವಾಗಿ ತಿಳಿಯಲು ಕಷ್ಟವಾದ, ನಯತ್ವವನ್ನು ಹೊಂದಿದ, ಸೂಕ್ಷ್ಮ ಸಂಜ್ಞೆಯಂತೆ ಗೋಚರಿಸುವ ಹಸಿರು ಮತ್ತು ನೀಲಿ ಬಣ್ಣವಾಗಿದೆ. ಬೆಳಕಿಗೆ ಒಡ್ಡಿದಾಕ್ಷಣ ವಿವಿಧ ಬಣ್ಣಗಳ ಮೆರುಗನ್ನು ನಮ್ಮ ಕಣ್ಣಿಗೆ ಅಪ್ಪಳಿಸುತ್ತದೆ' ಎಂಬುದು ಔರಾ.

ಒಪೆಲ್ ಕೂದಲ ಬಣ್ಣವು ಯಾವುದೇ ಅಡ್ಡಪರಿಣಾಮವನ್ನು ಉಂಟು ಮಾಡುವುದಿಲ್ಲ. ಅಲ್ಲದೆ ಕೂದಲಿಗೆ ಎಣ್ಣೆ ಹಚ್ಚಿದಾಗ ದೊರೆಯುವಂತಹ ಮೃದುತ್ವವನ್ನು ನೀಡುತ್ತದೆ ಮತ್ತು ಈಗಾಗಲೇ ಬೂದು ಬಣ್ಣಕ್ಕೆ ತಿರುಗುತ್ತಿರುವ ಕೂದಲುಗಳಿಂದ ತಮ್ಮ ಯೌವನ ವನ್ನು ತೋರಿಸಿಕೊಳ್ಳಲು ಮಹಿಳೆಯರಿಗೆ ಒಪೆಲ್ ಹೇರ್ ಬಣ್ಣವು ಸಹಕಾರಿಯಾಗಬಲ್ಲದು. ಒಪೆಲ್ ಮೆರುಗಿನ ಕೃತಕ ಟೋಪನ್‌ಗಳೂ ಇಂದು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಅವುಗಳಿಗೂ ಅಪಾರ ಬೇಡಿಕೆಯಿದೆ.



